**ದಿನಾಂಕ 24.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ಪಾಟೀಸವಾಲು– ಎದುರುದಾರ ಪರ ಶ್ರೀ. ಹೆಚ್.ವಿ. ವಕೀಲರಿಂದಃ**

ಮೃತ ಅನಿತಾ ಅವರಿಗೆ ನನ್ನ ಹೆಂಡತಿ ಹೊರತುಪಡಿಸಿ ಇನ್ನು ಇಬ್ಬರು ಜನ ತಮ್ಮಂದಿರು ಮತ್ತು ಇಬ್ಬರು ತಂಗಿಯರು ಇರುತ್ತಾರೆ. ನಾಲ್ಕು ಜನರಲ್ಲಿ ಇಬ್ಬರು ಜನ ತಮ್ಮಂದಿರು ಬದುಕಿರುತ್ತಾರೆ ಮತ್ತು ಇಬ್ಬರು ತಂಗಿಯರಲ್ಲಿ ಶೀಲಾ ಎಂಬುವವರು ಮಾತ್ರ ಬದುಕಿರುತ್ತಾರೆ. ಸದರಿ ನಾಲ್ಕು ಜನರಲ್ಲಿ ಆ ಇಬ್ಬರ ತಮ್ಮಂದಿರ ಹೆಸರು ಮಹೇಂದ್ರ ಮತ್ತು ಬಾಬು ಹಾಗೂ ಅಕ್ಕ ಹೇಮಾವತಿ ಮರಣ ಹೊಂದಿದ್ದವರು ನನ್ನ ಹೆಂಡತಿ ಆಗುತ್ತಾರೆ. ನಿ.ಪಿ.9 Adoption Deed ಬರೆಯುದಕ್ಕಿಂತ ಮುಂಚೆ ಮೃತ ಅನಿತಾರವರು ಕೆಲಸಕ್ಕೆ ಹೋಗುತ್ತಿದ್ದರು. ಅವರು Goodwill Fabrics Private Limited ನಲ್ಲಿ helper ಆಗಿ ಕೆಲಸ ಮಾಡುತ್ತಿದ್ದರು. ಅಲ್ಲಿ ಕೆಲಸ ಮಾಡುವಾಗ EPF ಕಟ್ಟುತ್ತಿದ್ದು ಅದಕ್ಕೆ ಅವರು ಯಾರನ್ನು Nominee ಮಾಡಿರಲಿಲ್ಲ. ಸದರಿ ನಿ.ಪಿ.9 Adoption Deed ಬರೆದು ಕೊಟ್ಟ ಮೇಲೆ ಅನಿತಾರವರಿಗೆ ಟಿ.ಬಿ. ಖಾಯಿಲೆ ಬಂದಿರುತ್ತದೆ. ಅನಿತಾರವರಿಗೆ ತಮ್ಮ ಜೀವಿತ ಕಾಲದಲ್ಲಿ ಅವರ ತಮ್ಮಂದಿರು ಅಥವಾ ಅಕ್ಕ ತಂಗಿಯರನ್ನು ಅಥವಾ ನನ್ನನ್ನು Nominee ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಿಜ. ಅನಿತಾರವರು ಮರಣ ಹೊಂದಿದ ನಂತರ ಅವರ ಹೆಸರಿನಲ್ಲಿ ಜಮಾ ಆಗಿರುವ EPF ಹಣ ಬಿಡುಗಡೆ ಕೋರಿ ನಾನು ಅವರ ಕಂಪನಿಗೆ ಅರ್ಜಿ ಸಲ್ಲಿಸಿರುತ್ತೇನೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ಸದರಿ ಅರ್ಜಿಯನ್ನು 2 ನೇ ಅರ್ಜಿದಾರರಾದ

ಮಾಸ್ಟರ್ ಮಂಜುನಾಥ ಅನಿತಾರವರ ಮಗನಾಗಿದ್ದು ಅವಳು ಮರಣ ಹೊಂದಿದ ನಂತರ ನಾನೇ ಆತನ ಪಾಲನೆ ಪೋಷಣೆ ಮಾಡುತ್ತಿದ್ದ ಕಾರಣ ನನ್ನನ್ನು Guardian ಎಂದು ನೇಮಕ ಮಾಡಲು ಅರ್ಜಿ ಸಲ್ಲಿಸಿರುತ್ತೇನೆ. ಆ ಕಾರಣದಿಂದ ಸದರಿ ಅರ್ಜಿಯಲ್ಲಿ ಕೇವಲ ನನ್ನನ್ನು Guardian ಅಂತ ನೇಮಕ ಮಾಡಲು ಬರುತ್ತದೆ ಆದರೆ EPF ಹಣ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಕೂಡ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸರಿ ಇದೆ,

57 ನೇ ಅ.ನ.ಸಿ. ನ್ಯಾಯಾಧೀಶರು
(ಸಿಸಿಎಚ್-58), ಮೇಯೋ ಹಾಲ್ ವಿಭಾಗ,
ಬೆಂಗಳೂರು.